ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1650(1895)**
2	ಸದಸ್ಯರ ಹೆಸರು	:	ಶ್ರೀ ಪ್ರತಾಪ್ ಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3	ಉತ್ತರಿಸಬೇಕಾದ ದಿನಾಂಕ	:	23-03-2021
4	ಉತ್ತರಿಸುವ ಸಚಿವರು	:	ನಗರಾಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರ
(ಅ)	ಉಡುಪಿ ಜಿಲ್ಲೆಯ ಕುಂದಾಪುರ ಪುರಸಭೆಗೆ ಕೆ.ಎಸ್.ಡಬ್ಲ್ಯೂ.ಎಸ್.ನಲ್ಲಿ 24/7 ಕುಡಿಯುವ ನೀರು ಪೂರೈಸುವ ಯೋಜನೆಯ ಡಿಪಿಆರ್ ಮತ್ತು ನಕ್ಷೆಯನ್ನು ತಯಾರಿಸಲಾಗಿದೆಯೇ: (ಪ್ರತಿಯನ್ನು ಒದಗಿಸುವುದು) ಈ ಯೋಜನೆಯ ಅಂದಾಜು ವೆಚ್ಚವೆಷ್ಟು; ಬಿಡುಗಡೆಯಾದ ಅನುದಾನವೆಷ್ಟು; ಬಿಡುಗಡೆಗೆ ಬಾಕಿಯಿರುವ ಅನುದಾನವೆಷ್ಟು; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)	ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನೊಂದಿಗೆ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮದಡಿ (ಕ್ವಿಮಿಪ್) ಉಡುಪಿ ಜಿಲ್ಲೆಯ ಕುಂದಾಪುರ ಪುರಸಭೆ ವ್ಯಾಪ್ತಿಯಲ್ಲಿ 24/7 ಕುಡಿಯುವ ನೀರು ಸರಬರಾಜು ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಗೆ ಡಿಪಿಆರ್ ಮತ್ತು ನಕ್ಷೆಯನ್ನು ತಯಾರಿಸಲಾಗಿದ್ದು, ಡಿಪಿಆರ್ ಮತ್ತು ನಕ್ಷೆಯ Soft copy ಯನ್ನು **CD** ಯಲ್ಲಿ ಒದಗಿಸಿದೆ ಯೋಜನೆಗೆ ಡಿಪಿಆರ್‌ನಂತೆ ಅಂದಾಜು ವೆಚ್ಚ ರೂ: 33.03 ಕೋಟಿಗಳು (ನಿರ್ಮಾಣಕ್ಕೆ-16.44 ಕೋಟಿಗಳು+ 8 ವರ್ಷಗಳ ನಿರ್ವಹಣೆಗೆ 16.59 ಕೋಟಿಗಳು) ಅನುಮೋದನೆಗೊಂಡ ಕಾಮಗಾರಿಯ ಗುತ್ತಿಗೆ ಮೊತ್ತ ರೂ:39.81 ಕೋಟಿಗಳು (ನಿರ್ಮಾಣಕ್ಕೆ-27.41 ಕೋಟಿಗಳು + 8 ವರ್ಷಗಳ ನಿರ್ವಹಣೆಗೆ 12.40 ಕೋಟಿಗಳು) ಕಾಮಗಾರಿಗೆ ಫೆಬ್ರವರಿ-2021ರ ಅಂತ್ಯದವರೆಗೂ ಬಿಡುಗಡೆಯಾಗಿರುವ ಮೊತ್ತ ರೂ:21.35 ಕೋಟಿಗಳು (ನಿರ್ಮಾಣಕ್ಕೆ) ಬಿಡುಗಡೆಗೆ ಬಾಕಿಯಿರುವ ಮೊತ್ತ ರೂ:6.06 ಕೋಟಿಗಳು (ನಿರ್ಮಾಣಕ್ಕೆ)
(ಆ)	ಈ ಕಾಮಗಾರಿಯ ಟೆಂಡರ್ ಅವಧಿ ಎಷ್ಟು; ಟೆಂಡರ್ ಪಡೆದ ಗುತ್ತಿಗೆದಾರರ ಹೆಸರು ಮತ್ತು ವಿಳಾಸ ಯಾವುದು; ಕಾಮಗಾರಿಯನ್ನು ಯಾವಾಗ ಮುಕ್ತಾಯಗೊಳಿಸಲಾಗುವುದು;	ಕಾಮಗಾರಿಗೆ ಟೆಂಡರ್‌ನಲ್ಲಿ 25 ತಿಂಗಳು ನಿರ್ಮಾಣಕ್ಕಾಗಿ ಮತ್ತು 8 ವರ್ಷ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ನಿಗಧಿ ಪಡಿಸಲಾಗಿರುತ್ತದೆ. ಗುತ್ತಿಗೆದಾರರ ಹೆಸರು ಮತ್ತು ವಿಳಾಸ: M/s Laxmi Civil Engineering Services Pvt Ltd. Sterling Tower, Govat Mandai, Kolhapur, Maharastra-416001.

		ಗುತ್ತಿಗೆ ಕರಾರಿನನ್ವಯ ಮುಕ್ತಾಯ ದಿನಾಂಕ:19.01.2020 ಆಗಿದ್ದು, ಕೋವಿಡ್‌ನಿಂದ ಹಾಗೂ ಮನೆಗಳಿಗೆ ನಳ ಸಂಪರ್ಕಗಳನ್ನು ನೀಡಲು ಗುತ್ತಿಗೆದಾರರಿಗೆ ಸ್ಥಳ ಒದಗಿಸಲು ಸ್ಥಳೀಯ ಸಂಸ್ಥೆಯಿಂದ ವಿಳಂಬವಾದ ಕಾರಣ ಕಾಲಾವಧಿಯನ್ನು ವಿಸ್ತರಿಸಿದ್ದು, ದಿನಾಂಕ: 31.05.2021 ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ.
(ಇ)	ಈ ಕಾಮಗಾರಿಗಾಗಿ ಕಾಂಕ್ರೀಟ್ ರಸ್ತೆಗಳ ಮಧ್ಯಭಾಗವನ್ನು ಕತ್ತರಿಸಿ ಕಾಮಗಾರಿ ನಿರ್ವಹಿಸಿದ್ದು ನಂತರ ಅವುಗಳನ್ನು ಮರುಕಾಂಕ್ರೀಟ್ ಮಾಡದಿರುವುದರಿಂದ ಜನ ಸಾಮಾನ್ಯರಿಗೆ ತೊಂದರೆಯಾಗುತ್ತಿರುವ ಬಗ್ಗೆ ಮಾದ್ಯಮದಲ್ಲಿ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಕಾಮಗಾರಿಯನ್ನು ಶೀಘ್ರವಾಗಿ ಮುಕ್ತಾಯಗೊಳಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?	ಈ ಕಾಮಗಾರಿಯಲ್ಲಿ ಪಟ್ಟಣದ ಅಗಲದ ರಸ್ತೆಗಳಲ್ಲಿ ಎರಡು ಬದಿಯಲ್ಲಿ HDPE ಪೈಪ್‌ಗಳನ್ನು ಅಳವಡಿಸಿ ಮನೆಗಳಿಗೆ ನಳಸಂಪರ್ಕಗಳನ್ನು ನೀಡಲಾಗುತ್ತಿದೆ. ಕಡಿಮೆಅಗಲದ ರಸ್ತೆಗಳಲ್ಲಿ ರಸ್ತೆಯಒಂದು ಬದಿಯಲ್ಲಿ ಪೈಪ್‌ಗಳನ್ನು ಅಳವಡಿಸಿ ರಸ್ತೆಯಎರಡು ಬದಿಯ ಮನೆಗಳಿಗೆ ನಳಸಂಪರ್ಕಗಳನ್ನು ನೀಡಲಾಗುತ್ತಿದೆ. ಈ ಸಂದರ್ಭದಲ್ಲಿಪೈಪ್ ನ ಇನ್ನೊಂದು ಬದಿಯ ಮನೆಗಳಿಗೆ ಕಾಂಕ್ರೀಟ್‌ರಸ್ತೆಯನ್ನು ಕತ್ತರಿಸಿ MDPE ಪೈಪ್ ಅಳವಡಿಸಿ ನಳಸಂಪರ್ಕಗಳನ್ನು ನೀಡಲಾಗುತ್ತಿದ್ದು, ಕತ್ತರಿಸಿದ ಕಾಂಕ್ರೀಟ್ ರಸ್ತೆಗಳನ್ನು ಮೂಲಸ್ಥಿತಿಗೆ ಪುನರ್ ನಿಮಾಣ ಮಾಡಲು ಕ್ರಮವಹಿಸಲಾಗಿದೆ. ಕಾಮಗಾರಿಯಲ್ಲಿ ಕತ್ತರಿಸಿದ ಕಾಂಕ್ರೀಟ್ ರಸ್ತೆಗಳನ್ನು ಮೂಲಸ್ಥಿತಿಗೆ ಪುನರ್ ನಿರ್ಮಾಣ ಮಾಡಲಾದ ಕೆಲವೊಂದು **ಛಾಯಾಚಿತ್ರಗಳನ್ನು ಲಗತ್ತಿಸಿದೆ.** ಕಾಮಗಾರಿಯಲ್ಲಿ ಶೇ 83.04 ರಷ್ಟು ಭೌತಿಕ ಪ್ರಗತಿಯಾಗಿದ್ದು, ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಯೋಜನೆಯನ್ನು ಬಳಕೆಗೆ ಸಿದ್ದಪಡಿಸಲಾಗುತ್ತಿದ್ದು ದಿನಾಂಕ:31.05.2021 ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಉದ್ದೇಶಿಸಿದೆ.

ಕಡತ ಸಂಖ್ಯೆ: ನಅಇ 88 ಪಿ.ಆರ್.ಜೆ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

Road Restoration works after provision of House Service Connection in Kundapura City



